ಓ ಎಸ್ ನಂಃ209/2016

**ಪಿ. ಡಬ್ಲ್ಯೂ ಃ 1**

**ದಿಃ 3.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 7(ಎ) ರವರ ಪರ ಶ್ರೀ ಕೆ ಎನ್ ಡಿ ವಕೀಲರಿಂದ ಃ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಹುಟ್ಟಿದ ವರ್ಷ ಯಾವುದು ಎಂದು ಗೊತ್ತಿಲ್ಲ ಈಗ ನನಗೆ 60 ವರ್ಷ ವಯಸ್ಸಿದೆ. ನನ್ನ ಆಧಾರ್ ಕಾರ್ಡು , ಮತದಾರರ ಗುರುತಿನ ಚೀಟಿ ಇವುಗಳನ್ನು ಕೊಡಲು ಯಾವುದೆ ತೊಂದರೆ ಇಲ್ಲ. ನಾನು ಈಗ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ವಾದಿ 2 ರಿಂದ 7 ರವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಪೈಕಿ ಉಮಾಶಂಕರ್ ಅಂದರೆ 5 ನೆ ವಾದಿ ದಾಬಸ್ ಪೇಟೆಯಲ್ಲಿ ವಾಸವಾಗಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ 1 ರಿಂದ 4 ರವರು ಮೊದಲು ಗುಡೇಮಾರನಹಳ್ಳಿಯಲ್ಲಿದ್ದರು, ಈಗ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ದಾವೆ ಹಾಕಿದ ಪ್ರಕಾರ ಈಗ ಅವರೆಲ್ಲ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ.

ದಾವಾ ಸ್ವತ್ತಿನ ಸ.ನಂ. 43 ನ್ನು ನಮ್ಮ ತಾತ ಕೋರ್ಟ್ ನ ಹರಾಜಿನಲ್ಲಿ ತೆಗೆದುಕೊಂಡಿದ್ದಾರೆ. ಅದನ್ನು ಹರಾಜಿನಲ್ಲಿ ತೆಗೆದುಕೊಂಡ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದೇವೆ. ಆ ರೀತಿಯ ಯಾವುದೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ, ನಾನು ವಿದ್ಯಾಭ್ಯಾಸ ಮಾಡದ ಕಾರಣ ಅದನ್ನುಗುರುತಿಸಲು ಆಗುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 43 ಒಟ್ಟು 6 ಎಕರೆ 30 ಗುಂಟೆ ಇದೆ. ಆ ಸ್ವತ್ತನ್ನು ಯಾವ ವರ್ಷದಲ್ಲಿ ನಮ್ಮ ತಾತ ಹರಾಜಿನಲ್ಲಿ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳ ಪ್ರಕಾರ ಸ.ನಂ. 43 ಸರ್ಕಾರಿ ಜಮೀನು ಇದೆ ಎಂದು ನಮ್ಮ ವಕೀಲರು ಓದಿ ಹೇಳಿಲ್ಲ. ಸ.ನಂ. 43 ರಿಸರ್ವೇಯಾಗಿ 43/1 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 6 ನ್ನು ನಾವೇ ಕೊಟ್ಟಿದ್ದೇವೆ. ಆ ದಾಖಲೆಯನ್ನು ನಾನೇ ಹಾಜರುಪಡಿಸಿರುತ್ತೇನೆ.

ನಿ ಪಿ 7 ರ ಪ್ರಕಾರ ಸ.ನಂ. 43/1 ಇದು ರಾಮಯ್ಯ ಬಿನ್ ಮರಿಲಿಂಗಯ್ಯ ಇವರಿಗೆ 3 ಎಕರೆ 8 ಗುಂಟೆ ಮತ್ತು ಮುದ್ದಯ್ಯ ಬಿನ್ ಸಂಜೀವೇಗೌಡ ಇವರಿಗೆ 1 ಎಕರೆ 38 ಗುಂಟೆ ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 43/1 ಎ ಇದನ್ನು ಪ್ರತಿವಾದಿಗಳ ತಾತ ನಂಜಪ್ಪ ಇವರು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 54 ವರ್ಷಗಳಿಂದ ಪ್ರತಿವಾದಿ 7 (ಎ) ಇವರ ತಾತ ನಂಜಪ್ಪ ಇವರಿಗೆ ಆರ್ ಟಿ ಸಿ ಗಳು ಬರುತ್ತಿವೆ ಎಂದರೆ ನನಗೆ

ಗೊತ್ತಿಲ್ಲ. 1995 ರಲ್ಲಿ ನಂಜಪ್ಪ ಇವರ ಮಕ್ಕಳ ಮದ್ಯೆ ಭಾಗ ಆಗಿ ಅವರ ಹೆಸರಿನಲ್ಲಿ ಪಹಣಿಗಳು ಬರುತ್ತಿವೆ ಎಂದರೆ ನನಗೆ ಗೂತ್ತಿಲ್ಲ. ಆರ್ ಟಿ ಸಿ ಗಳನ್ನು ನಾವೇ ಹಾಜರುಪಡಿಸಿದ್ದೇವೆ ಎಂದರೆ ಸರಿ. 43/1 ಎ ಇದನ್ನು ನಮ್ಮ ತಾತನ ಹೆಸರಿನಲ್ಲಿ ಮತ್ತು 43/1 ಬಿ ಇದನ್ನು ಸಂಜೀವೇಗೌಡ ಇವರ ಹೆಸರಿನಲ್ಲಿ ಖಾತ ಬದಲಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ತಾತ 43/1 ಬಿ ಇದನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ನಾನು ದಾವೆಯಲ್ಲಿ ಕಪ್ಪಣ್ಣ ಇವರ ಹೆಸರನ್ನು ಹೇಳಿಲ್ಲ. ಕಪ್ಪಣ್ಣ ಇವರ ತಂದೆಯ ಹೆಸರು ನಂಜುಂಡಯ್ಯ ಎಂದರೆ ನನಗೆ ಗೊತ್ತಿಲ್ಲ. ಅವರಿಂದ ನಂಜಪ್ಪ ಇವರು 1 ಎಕರೆ 34 ಗುಂಟೆಯನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲವನ್ನು ಒಟ್ಟಿಗೆ ಸೇರಿಸಿದರೆ 6 ಎಕರೆ 30 ಗುಂಟೆ ಬರುತ್ತದೆ ಎಂದರೆ ಸರಿ. ಪ್ರತಿವಾದಿ 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಕ್ರಯವಾದ ವಿಷಯವನ್ನು ಮತ್ತು ಕ್ರಯಪತ್ರಗಳನ್ನು ದಾವೆಯ ಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯನ್ನು ನಾನೇ ಹಾಕಿದ್ದೇನೆ ಎಂದರೆ ಸರಿ. ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ಓದಿ ಹೇಳಿದ್ದಾರೆ. ದಿನಾಂಕಃ 4.02.1952 ರಲ್ಲಿ ನಮ್ಮ ಮತ್ತು ನಮ್ಮ ಅಣ್ಣ ತಮ್ಮಂದಿರ ಮದ್ಯೆ ಭಾಗವಾಗಿದೆ ಎಂದು ವಾದಪತ್ರದಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ಆ ಭಾಗದ ಪ್ರಕಾರ ಸ.ನಂ. 43 ಯಾರಿಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆ ವಿಭಾಗಪತ್ರದಲ್ಲಿ ಸ.ನಂ. 43 ರ ವಿಸ್ತೀರ್ಣವನ್ನು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿಯಲ್ಲ.

ಮರಿಲಿಂಗಯ್ಯ ನನ್ನ ತಾತನಾಗಬೇಕು. ಬೈರಯ್ಯ ಎಂಬುವವರು ಇಬ್ಬರು ಇರುತ್ತಾರೆ. ನಮ್ಮ ತಂದೆ ಹಾಗೂ ನಮ್ಮ ದೊಡ್ಡಪ್ಪನ ಹೆಸರು ಬೈರಯ್ಯ ಇರುತ್ತದೆ. ಮರಿಲಿಂಗಯ್ಯ ಇವರ ಮಗ ಬೈರಯ್ಯ ನಮ್ಮ ದೊಡ್ಡಪ್ಪ ಆಗಬೇಕು. ರಾಮಯ್ಯ ಅಲಿಯಾಸ್ ವೆಂಕಟಯ್ಯ ನಮ್ಮ ತಂದೆ, ಅಂದಾನಯ್ಯ, ಗವಿಯಪ್ಪ ಮತ್ತು ಗಂಗಾಧರಯ್ಯ ನಮ್ಮ ಚಿಕ್ಕಪ್ಪಂದಿರು ಇರುತ್ತಾರೆ. ಬೈರಯ್ಯ ಇವರ ಮಗ ಗಂಗಯ್ಯ ನನ್ನ ಅಣ್ಣನಾಗಬೇಕು. ಅದೇ ರೀತಿ ನಿಂಗಯ್ಯ ಇವರು ನನ್ನ ಅಣ್ಣನಾಗಬೇಕು. ಶಿವಣ್ಣ ನನ್ನ ಮಗನಾಗಬೇಕು. ಪುಟ್ಟಮ್ಮ ಇವರು ನನ್ನ ದೊಡ್ಡಮ್ಮನಾಗಬೇಕು ಅವರು ನಮ್ಮ ದೊಡ್ಡಪ್ಪ ಬೈರಪ್ಪ ಇವರ ಹೆಂಡತಿ ಇರುತ್ತಾರೆ. ಕೆಂಪಮ್ಮ ನಮ್ಮ ಅಜ್ಜಿ ಇರುತ್ತಾರೆ. ಕೆಂಪಮ್ಮ ಇವರು ಸಹ ಕ್ರಯಪತ್ರಕ್ಕೆ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ತಂದೆ ನಮ್ಮ ತಾಯಿಯನ್ನು ಯಾವ ವರ್ಷದಲ್ಲಿ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. 1962 ರಲ್ಲಿ ನಾನು ಹುಟ್ಟಿರಬಹುದು, ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ಸಮಯದಲ್ಲಿ ವಾದಿಗಳು ಯಾರು ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ. ಕಪ್ಪಣ್ಣ ಎಂಬುವವರಿಂದ 1932

ರಲ್ಲಿ ನಮ್ಮ ತಾತ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದು ವಾದಪತ್ರದಲ್ಲಿ ಬರೆಯಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.ಸ.ನಂ. 43 ರಲ್ಲಿ 4 ಎಕರೆ 28 ಗುಂಟೆಯನ್ನು ನಮ್ಮ ತಾತ ಕ್ರಯಕ್ಕೆ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದ 7 ನೆ ಪ್ಯಾರಾದಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ಅದರ ಪ್ರಕಾರ ಕಪ್ಪಣ್ಣ ಇವರಿಂದ ನಾವು ಆ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಕಪ್ಪಣ್ಣ ಇವರು 4 ಎಕರೆ 28 ಗುಂಟೆ ಯನ್ನು ನಮಗೆ ಕ್ರಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ ಪಿ 10 ನ್ನು ನಮ್ಮ ವಕೀಲರಿಗೆ ತೋರಿಸಿದ್ದೇವೆ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಸರ್ಕಾರಿ ದಾಖಲೆಗಳ ಪ್ರಕಾರ ಅದರಲ್ಲಿ 3 ಭಾಗಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ, ನನಗೆ ಯಾವುದೆ ವಿಷಯ ಗೊತ್ತಿಲ್ಲದೆ ಇದ್ದರೂ ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರವರಿಗೆ ಆದ 3 ಕ್ರಯಪತ್ರಗಳನ್ನು ರದ್ದು ಪಡಿಸಲು ಕೋರಿ ನಾನು ಯಾವುದೆ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ನಮ್ಮ ಕುಟುಂಬದವರು ಸ.ನಂ. 43/1 ಎ ರಲ್ಲಿ 3 ಎಕರೆ 8 ಗುಂಟೆ ಇದನ್ನು ಈಗಾಗಲೇ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕೆ ಎನ್ ಡಿ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**